**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 127/2022**

| | | |
|---|---|---|
| ಹೆಸರು | ಃ ಭಾನುಕುಮಾರ್ | ಸಿ.ಡಬ್ಲ್ಯೂ 3 |
| ತಂದೆಯ ಹೆಸರು | ಃ ದೇವೇಗೌಡ | ಪಿ.ಡಬ್ಲ್ಯೂ 2 |
| ವಯಸ್ಸು | ಃ **38** ವರ್ಷ | |
| ಉದ್ಯೋಗ | ಃ ಶುಗರ್ ಫ್ಯಾಕ್ಟರಿಯಲ್ಲಿ ಕೆಲಸ | |
| ವಾಸ ಸ್ಥಳ | ಃ ನಂದೀಪುರ | |

ಸಾಕ್ಷಿಗೆ ದಿನಾಂಕಃ **04.12.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .**

ಚಾಸಾ 1, 2, 4 ಮತ್ತು 5 ರವರ ಪರಿಚಯವಿದೆ. ಚಾಸಾ 1ರವರು ಮೃತರಾಗಿರುತ್ತಾರೆ. ಈಗ ನೋಡುತ್ತಿರುವ ನಿಪಿ 1 ದಾಖಲೆಗೆ 2 ವರ್ಷಗಳ ಹಿಂದೆ ಪೊಲೀಸರ ಕೋರಿಕೆ ಮೇರೆಗೆ ನಾನು ಜಮೀನಿಗೆ ಹೋಗುತ್ತಿದ್ದ ಅವಧಿಯಲ್ಲಿ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ 1ಬಿ ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ.

**ಎ.ಪಿ.ಪಿ. ರವರ ಕೋರಿಕೆ ಮೇರೆಗೆ ಪ್ರತೀಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು ಮತ್ತು ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲುಃ ಎ.ಪಿ.ಪಿ.ರವರಿಂದ:**

ದಿ: 15.10.2021ರಂದು ಗಲಾಟೆಯ ಸಂಬಂಧವಾಗಿ ಚಾಸಾ 1ರವರ ವಾಸದ ಮನೆಯ ಮುಂದಿನ ಖಾಲಿ ಜಾಗದಲ್ಲಿ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 2 ರವರ ಸಮಕ್ಷಮ ಪೊಲೀಸರು ನಿಪಿ 1 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ

ಎಲ್ಲಾ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿ ಪರ ವಾಟೀ ಸವಾಲುಃ ಇರುವುದಿಲ್ಲ.</u>**

**<u>ಮರುವಿಚಾರಣೆ ಇರುವುದಿಲ್ಲ.</u>**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.